**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 16-06-2023.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ.ಆರ್ ಎಮ್ ಎಚ್ ವಕೀಲರಿಂದಃ</u>**

1. ಸರ್ವೆ ನಂ.143/1 ಆಸ್ತಿ ಮೂಲತಃ ಯಾವ ಮನೆತನಕ್ಕೆ ಸೇರಿತ್ತು ಎಂದು ಹೇಳಲು ಬರುವುದಿಲ್ಲ. ಮೂಲತಃ ಸದರಿ ಆಸ್ತಿ ಯಾರು ಯಾರು ಹಂಚಿಕೊಂಡರು ಎಂದು ಹೇಳಲು ಬರುವುದಿಲ್ಲ. ನಿಪಿ.9 ಮತ್ತು ನಿಪಿ.21 ಖರೀದಿ ದಾಖಲೆಗಳು ಸಿಧ್ರಾಮಪ್ಪಾ ಜಂಗಳಿ ರವರು ಶಿವರುದ್ರಪ್ಪಾ ನಾವಿ ರವರಿಗೆ ಬರೆದುಕೊಟ್ಟಿದ್ದಾರೆ ಎಂದು ನಮೂದಿಸಲಾಗಿದೆ. ನಿಪಿ.21 ರಲ್ಲಿ ಸದರಿ ಸಿಧ್ರಾಮಪ್ಪಾ ರವರ ಮಗನಿಗೆ ಶಿವರುದ್ರಪ್ಪಾ ರವರ ಮಗ ಬಾಳಪ್ಪಾ ರವರು ಬರೆದುಕೊಟ್ಟಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ನಿಜ. ನಿಪಿ.9 ಮತ್ತು 21 ತಮ್ಮ ತಮ್ಮ ನಡುವೆ ಸೃಷ್ಟಿ ಮಾಡಿಕೊಂಡಿರುವ ಸುಳ್ಳು ದಾಖಲೆಗಳು ಎಂದರೆ ಸರಿಯಲ್ಲ. ನಿಪಿ.9 ಮತ್ತು 21 ದಾಖಲೆಗಳ ಮೂಲ ಪತ್ರಗಳು ನನ್ನ ಕಾಕಾನ ಬಳಿ ಇವೆ. ಸದರಿ ಮೂಲ ದಾಖಲೆಗಳನ್ನು ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ನಿಪಿ.9 ಮತ್ತು 21 ಸೃಷ್ಟಿ ಮಾಡಿಕೊಂಡಿರುವ ದಾಖಲೆಗಳು ಆಗಿದ್ದರಿಂದ, ಸದರಿ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.9 ಮತ್ತು 21 ರಲ್ಲಿ ಖರೀದಿದಾರರು ಮತ್ತು ಮಾರಾಟಗಾರರು ಎಂದು ನಮೂದಿಸಲಾದ ವ್ಯಕ್ತಿಯರಿಗೆ ಸದರಿ ದಾಖಲೆಗಳಿಂದ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ದಾಖಲೆಗಳಲ್ಲಿ ತಪ್ಪು ನಮೂದು ಆಗಿರುವ ಹೆಸರುಗಳ ದುರುಪಯೋಗ ಪಡೆದುಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಪಾಲು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು ಘೋಷಣೆ ಕೋರಿ ದಾವೆ ಸಲ್ಲಿಸುವ ಯಾವುದೇ ಕಾರಣ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸೃಷ್ಟಿ ಮಾಡಿ ಸುಳ್ಳು ದಾವಾ ಕಾರಣ ಹೇಳಿ ಸುಳ್ಳು ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ

ಪತ್ರದಲ್ಲಿ ಸುಳ್ಳು ವಿಚಾರಗಳನ್ನು ಬರೆಯಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ.18 ರಿಂದ 20 ಪೊಟೊಗಳನ್ನು ಪ್ರತಿವಾದಿ ನಂ.1 ರವರು ಇಟ್ಟಂಗಿ ತಂದು ಇಟ್ಟಿದ್ದಾರೆ ಹಾಗೂ ಶೆಟ್ಟ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಹಾಜರು ಮಾಡಿದ್ದೇನೆ. ದಾವಾ ಆಸ್ತಿಯಲ್ಲಿ ಮೊದಲು ದನ ಕಟ್ಟಲು ಪ್ರತಿವಾದಿ ನಂ.1 ರವರಿಗೆ ಸೇರಿದ ಹಳೆಯ ಕೊಟ್ಟಿಗೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರು ಕೊಟ್ಟಿಗೆ ಹಳೆಯದಾಗಿದೆ ಹಾಗೂ ಜೀರ್ಣಾವಸ್ಥಿಯಲ್ಲಿ ಇರುವುದರಿಂದ ಅದನ್ನು ತೆಗೆದು ಶೆಡ್ ಹಾಕಬೇಕು ಎಂದು ಇಟ್ಟಂಗಿ ತರಿಸಿದಾಗ ನಾವು ಅವರಿಗೆ ಅಡಚಣೆ ಮಾಡಿ, ಸುಳ್ಳು ಅರ್ಜಿ ಸಲ್ಲಿಸಿದ್ದೆವು ಅಂದರೆ ಸರಿಯಲ್ಲ. ಅವರು ಶೆಡ್ಡ ಹಾಕಿದ ನಂತರ ನಾವು ಮಧ್ಯಂತರ ಅರ್ಜಿ ಸಲ್ಲಿಸಿ ಪ್ರತಿವಾದಿ ನಂ.1 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಪ್ರತಿಬಂಧಕ ಆಜ್ಞೆ ಆದೇಶ ಕೋರಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿ ನಂ.1 ರವರ ಕಬ್ಜೆಯಲ್ಲಿ ಇದೆ ನಮ್ಮ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಕಬ್ಜೆಯಲ್ಲಿ ಇಲ್ಲ, ಕಬ್ಜೆಯಲ್ಲಿ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**